**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **396/2015** ಸಿ.ಡಬ್ಲ್ಯೂ –**11** ಪಿ.ಡಬ್ಲ್ಯೂ -**07**

| | | |
|---|---|---|
| ಹೆಸರು | ಃ | ಅಸ್ಲಂಮಭಾಷಾ |
| ತಂದೆಃಗಂಡ | ಃ | ಮೈಹಿಬೂಬಪೀರಾ |
| ವಯಸ್ಸು | ಃ | ೫೫ ವರ್ಷ |
| ಉದ್ಯೋಗ | : | ಡಿ.ವಾಯ್.ಎಸ್.ಪಿ. ಸಿಐಡಿ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ **23.06.2025**

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ಅಕ್ಟೋಬರ **2006** ರಿಂದ ಜೂನ್ **2011** ರವರೆಗೆ ಪಿ.ಎಸ್.ಐ ಆಗಿ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿ. **16-05-2011** ರಂದು ರಾತ್ರಿ **9.00** ಗಂಟೆಗೆ ಚಾಸಾ-**1** ರವರು ಒಂದು ಗಣಕೀಕೃತ ಪಿರ್ಯಾಧಿಯನ್ನು ನೀಡಿದ್ದು, ಆ ಪಿರ್ಯಾಧಿಯನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ **68/2011** ನ್ನು ತಯಾರಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-**1** ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-**1**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-**11** ಎಂದು, ಸಾಕ್ಷಿಯು ಸಹಿಯನ್ನು ನಿಪಿ. **11**-ಎ ಎಂದು ಗುರುತಿಸಲಾಯಿತು.

ದಿನಾಂಕ **17-05-2011** ರಂದು ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಗುನ್ನಾ ಸ್ಥಳದ ಪಂಚನಾಮೆಯನ್ನು ಚಾಸಾ-**2** ಮತ್ತು ಚಾಸಾ-**3** ರವರ ಸಮಕ್ಷಮ ಕೈಗೊಂಡು ನಂತರ ದಿಃ **18-05-2011** ರಂದು ಠಾಣಾ ಸರಹದ್ದಿನ ಆಧಾರದ ಮೇಲೆ ಆಳಂದ ಪೋಲಿಸ್ ಠಾಣೆ ದೂರನ್ನು ವರ್ಗಾಯಿಸಿರುತ್ತೇನೆ. ಸಾಕ್ಷಿಯು ಈಗ

ಗುನ್ನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-12 ಎಂದು, ಸಾಕ್ಷಿಯು ಸಹಿಯನ್ನು ನಿಪಿ. 12-ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಆರ್ ಕೆ ಎಚ್ ವಕೀಲರಿಂದಃ**

ದಿ. 16-05-2011 ರಂದು ರಾತ್ರಿ 9.00 ಗಂಟೆಗೆ ಚಾಸಾ-1 ರವರು ಒಂದು ಗಣಕೀಕೃತ ಪಿರ್ಯಾಧಿಯನ್ನು ನೀಡಿದ್ದು, ಆ ಪಿರ್ಯಾಧಿಯನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 68/2011 ನ್ನು ತಯಾರಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 17-05-2011 ರಂದು ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಗುನ್ನಾ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಕೈಗೊಂಡಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ದಿಃ 18-05-2011 ರಂದು ಠಾಣಾ ಸರಹದ್ದಿನ ಆಧಾರದ ಮೇಲೆ ಆಳಂದ ಪೋಲಿಸ್ ಠಾಣೆ ದೂರನ್ನು ವರ್ಗಾಯಿಸಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಬಿ.ಎ.ಡಿ ವಕೀಲರಿಂದಃ**

ದಿನಾಂಕ 17-05-2011 ರಂದು ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಗುನ್ನಾ ಸ್ಥಳದ ಪಂಚನಾಮೆಯನ್ನು ಮಾಡದೇ ಇದ್ದರೂ ಮಾಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೇ ಕುಳಿತು ದಾಖಲೆಗಳನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸರ್ಕಾರದಿಂದ ಯಾವುದೇ ಆದೇಶ ಇಲ್ಲದೇ ಇದ್ದರೂ ನಾನು ದೂರನ್ನು ವರ್ಗಾವಣೆ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಪೋಲಿಸ್ ಮ್ಯಾನುವಲ್ ಪ್ರಕಾರ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ದಿಃ 18-05-2011 ರಂದು ಠಾಣಾ ಸರಹದ್ದಿನ ಆಧಾರದ ಮೇಲೆ ಆಳಂದ ಪೋಲಿಸ್ ಠಾಣೆ ದೂರನ್ನು ವಿನಃ ಕಾರಣ ವರ್ಗಾಯಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.